ಎಂದು ಪರಿಗಣಿಸಿ ಸಹಾಯ ಮಾಡುತ್ತೇವೆ, ತೆರೆದ ಬಾವಿಯಲ್ಲಿ ೫೦೦೦ ಗ್ಯಾಲನ್‌ಗಿಂತ ಕಡಿಮೆ ನೀರು ರಬಿ ಸೀಸನ್‌ನಲ್ಲಿ ಬಂದರೆ ಅದನ್ನು ಕೂಡ ವಿಫಲಬಾವಿ ಎಂದು ಪರಿಗಣಿಸಿ ಸರ್ಕಾರ ಸಹಾಯ ಮಾಡುತ್ತದೆ. ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ ಕೃಷ್ಣಪ್ಪ.—ಶ್ರೀಮತಿ ಬಿ ಕಮಲಮ್ಮ ಎನ್ನುವವರ ಬಗ್ಗೆ ವಿವರವನ್ನು ಕೊಟ್ಟಿದ್ದೀರಿ, ವಿಫಲವಾದ ಬಾವಿ ಎಂದು ತಾವು ಹೇಳಿದ್ದೀರಿ. ಅವರಿಗೆ ಬಡ್ಡಿಯನ್ನು ಮಾತ್ರ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಈಗಿನ ಪರಿಸ್ಥಿತಿ ಮತ್ತು ತಮ್ಮ ಆರ್ಡರ್ ನೋಡಿ ಪೂರ್ತಿ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರು ಹೇಳಿದ ವಿಷಯ ಇವತ್ತು ಮಾಡಿದ ಆದೇಶ ಅಲ್ಲ. ೧೯೭೮ನೇ ಇಸವಿಯ ಜನವರಿ ತಿಂಗಳು ೧೩ನೇ ತಾರೀಖು ಮಾಡಿದ ಆದೇಶ ಅದು. ಆವತ್ತು ಜಾರಿಯಲ್ಲಿದ್ದ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರ ಇವತ್ತು ಪುನರ್‌ಪರಿಶೀಲಿಸುವುದು ಸಾಧ್ಯ ಇಲ್ಲ.

ಪ್ರಶ್ನೆ ಸಂಖ್ಯೆ ೧೯೧ (೮೫೫)
ಪ್ರಶ್ನೆ ಸಂಖ್ಯೆ ೧೯೨ (೯೫೫)
ಪ್ರಶ್ನೆ ಸಂಖ್ಯೆ ೧೯೩ (೧೩೯) } ಸದಸ್ಯರುಗಳು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ ೧೯೪ (೧೦೨೭)

ದಕ್ಷಿಣ ಕನ್ನಡದಲ್ಲಿ ಸಹಕಾರಿ ಸಂಘಗಳು

೫೮೪. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ). — ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ ?

ಅ) ದಕ್ಷಿಣ ಕನ್ನಡದಲ್ಲಿರುವ ಸಹಕಾರಿ ಸಂಘ ಸಂಸ್ಥೆಗಳ ಸಂಖ್ಯೆ ಎಷ್ಟು ?

ಆ) ೧೯೫೫-೫೬, ೧೯೮೬-೮೭ನೇ ಡಿಸೆಂಬರ್ ಅಂತ್ಯದವರೆಗೆ ಲಾಭದಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು ಹಾಗೂ ನಷ್ಟದಲ್ಲಿರುವ ಸಂಘಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು)

ಇ) ಸದರಿ ಸಹಕಾರ ಸಂಘಗಳಲ್ಲಿ ಯಾವುದಾದರಲ್ಲಿ ಹಣ ದುರುಪಯೋಗವಾಗಿವೆಯೇ, ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

ಶ್ರೀ ಹೆಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ ೩೦-೬-೧೯೮೭ಕ್ಕೆ ಒಟ್ಟು ೧೦೨೨ ಸಹಕಾರ ಸಂಘಗಳಿರುತ್ತವೆ. ಇವುಗಳ ಜೊತೆಗೆ ೧೧೪ ಸಹಕಾರ ಸಂಘಗಳು ಸಮಾಪನಾದಂತದಲ್ಲಿರುತ್ತವೆ.

ಆ) ೧೯೫೫-೫೬ನೇ ಸಾಲಿಗೆ ಲಾಭದಲ್ಲಿ ೪೬೫ ಸಹಕಾರ ಸಂಘಗಳು, ನಷ್ಟದಲ್ಲಿ ೪೩೪ ಸಹಕಾರ ಸಂಘಗಳು ಹಾಗೂ ೧೯೮೬-೮೭ನೇ ಸಾಲಿಗೆ ಲಾಭದಲ್ಲಿ ೫೧೪ ಸಹಕಾರ ಸಂಘಗಳು, ನಷ್ಟದಲ್ಲಿ ೪೭೫ ಸಹಕಾರ ಸಂಘಗಳು ಇವೆ.

ಇ) ಸದರಿ ಸಹಕಾರ ಸಂಘಗಳ ಪೈಕಿ ದಿನಾಂಕ ೩೦-೧೨-೧೯೮೭ಕ್ಕೆ ಇದ್ದಂತೆ ೧೧೫ ಸಹಕಾರ ಸಂಘಗಳಲ್ಲಿ ೧೫೨ ಹಣ ದುರುಪಯೋಗ ಪ್ರಕರಣಗಳು ಬೆಳಕಿಗೆ ಬಂದಿದ್ದು, ದುರುಪಯೋಗಗೊಳಿಸಿದ ಮೊತ್ತ ರೂ. ೧,೦೪,೭೫,೬೯೯-೨೬ ಗಳಾಗಿರುತ್ತವೆ. ಈ ಪೈಕಿ ೨೫ ಪ್ರಕರಣಗಳಲ್ಲಿ ಪೂರ್ಣವಾಗಿಯೂ, ೨೮ ಪ್ರಕರಣಗಳಲ್ಲಿ ಭಾಗಶಃವಾಗಿ ಒಟ್ಟು ರೂ. ೧೫,೬೩,೪೭೦-೮೯ಗಳು ವಸೂಲಿಯಾಗಿರುತ್ತದೆ. ರೂ. ೮೯,೧೧,೯೧೮-೩೭ಗಳು ೨೨೭ ಪ್ರಕರಣಗಳಲ್ಲಿ ವಸೂಲಿಯಾಗಬೇಕಾಗಿರುತ್ತದೆ. ಈ ಪೈಕಿ ೧೦೨ ಪ್ರಕರಣಗಳಲ್ಲಿ ಬಡ್ಡಿ ಸೇರಿ ೯೦,೪೩,೯೪೨-೨೬ ರೂ.ಗಳಿಗೆ ಸಿವಿಲ್ ದಾವೆ ಹೂಡಲಾಗಿದೆ. ೪೪ ಪ್ರಕರಣಗಳಲ್ಲಿ ೮೪,೨೦,೩೬೦-೨೦ ರೂ. ಗಳನ್ನೊಳಗೊಂಡಿರುವ ದುರುಪಯೋಗಕ್ಕೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— (ಶ್ರೀ ಟಿ. ಎಂ. ಇದಿನಬ್ಬ ಅವರ ಪರವಾಗಿ).—

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸಹಕಾರ ಸಂಘಗಳಲ್ಲಿ ದುರುಪಯೋಗ ಆಗಿದೆ ಎಂದು ಹೇಳಿದ್ದೀರಿ. ೧ ಕೋಟಿ ರೂಪಾಯಿಗೂ ಮೇಲ್ಪಟ್ಟು ದುರುಪಯೋಗ ಆಗಿದೆ ಎಂದು ಹೇಳಿದ್ದೀರಿ. ಈ ರೀತಿ ಹಣ ದುರುಪಯೋಗ ಮಾಡುವಂಥ ಸಹಕಾರ ಸಂಘಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುತ್ತೀರಾ ? ಈಗ ದುರುಪಯೋಗ ಮಾಡಿರುವ ಸಹಕಾರ ಸಂಘಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಎಲ್ಲೆಲ್ಲಿ ದುರುಪಯೋಗದ ಆಪಾದನೆಗಳಿವೆ, ಎಲ್ಲಿ ಕ್ರಿಮಿನಲ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುವುದಕ್ಕೆ ಆರ್ಹವಾಗಿವೆ ಅಂಥ ಸಂದರ್ಭದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಉಳಿದ ಪ್ರಕರಣಗಳಲ್ಲಿ ಪರಿಶೀಲಿಸಿ ಎಲ್ಲಿ ಪ್ರೈಮಾಫೇಸಿ ಕೇಸ್ ಇದೆ ಅಂಥ ಸಂದರ್ಭದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುತ್ತೇವೆ.

ಮೂಂದೂಡಲ್ಪಟ್ಟಿದ್ದ ಪ್ರಶ್ನೆಗಳು

ಸಂಖ್ಯೆ. ೧೭ (೪೬೨)—ಸದಸ್ಯರು ಇರಲಿಲ್ಲ.
ಸಂಖ್ಯೆ. ೨೬ (೪೧೧)—ಸದಸ್ಯರು ಇರಲಿಲ್ಲ.

ರಾಜ್ಯದಲ್ಲಿರುವ ಕೈಗಾರಿಕಾ ಸಹಕಾರ ಸಂಘಗಳು

೩೮೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೭ರ ಅಂತ್ಯದವರೆಗೆ ಇರುವ ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ ಎಷ್ಟು, ಇವುಗಳಲ್ಲಿ ಮಹಿಳಾ ಸಹಕಾರ ಸಂಘಗಳೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕೈಗಾರಿಕಾ ಸಹಕಾರ ಸಂಘಗಳಲ್ಲಿ ಎಷ್ಟು ಸಂಘಗಳು ನಷ್ಟದಲ್ಲಿವೆ ? ಹಾಗೂ ಎಷ್ಟು ವರ್ಷಗಳಿಂದ?

ಇ) ಇವುಗಳ ಬಲ ಸಂವರ್ಧನೆಗಾಗಿ ಸರ್ಕಾರವು ಯಾವ ಕಾರ್ಯಕ್ರಮ ಕೈಗೊಂಡಿದೆ ?

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕೆ ಸಹಕಾರ ಸಚಿವರು).—

ಅ) ರಾಜ್ಯದಲ್ಲಿ ೧೯೮೭ರ ಅಂತ್ಯದವರೆಗೆ ೧೮೮೨ ಕೈಗಾರಿಕಾ ಸಹಕಾರ ಸಂಘಗಳಿರುತ್ತವೆ. ಇವುಗಳ ಪೈಕಿ ೬೧ ಮಹಿಳಾ ಕೈಗಾರಿಕಾ ಸಹಕಾರ ಸಂಘಗಳಿರುತ್ತವೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ)

ಆ) ಈ ೧೮೮೨ ಕೈಗಾರಿಕಾ ಸಹಕಾರ ಸಂಘಗಳಲ್ಲಿ, ಒಟ್ಟು ೯೪೧ ಸಹಕಾರ ಸಂಘಗಳು ನಷ್ಟದಲ್ಲಿವೆ. ೩ ವರ್ಷಗಳಿಂದ ೧೦ ವರ್ಷಗಳವರೆಗೆ ನಷ್ಟದಲ್ಲಿವೆ. ೬೧ ಮಹಿಳಾ ಕೈಗಾರಿಕಾ ಸಹಕಾರ ಸಂಘಗಳಲ್ಲಿ ೩೪ ಸಹಕಾರ ಸಂಘಗಳು ನಷ್ಟದಲ್ಲಿವೆ.

ಇ) ಈ ಸಹಕಾರ ಸಂಘಗಳ ಬಲ ಸಂವರ್ಧನೆಗಾಗಿ ಪುನರ್ ಸಂಘಟನೆ ಕಾರ್ಯಕ್ರಮವು ಪ್ರಗತಿಯಲ್ಲಿದೆ. ಆರ್ಥಿಕವಾಗಿ ದುರ್ಬಲವಾಗಿರುವ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಹೂಡಿಕೆ, ಸದಸ್ಯರಿಗೆ ಶೇರು ಬಂಡವಾಳ ಸಾಲ ಮತ್ತು ಸಿಬ್ಬಂದಿ ವೆಚ್ಚದ ನಿರ್ವಹಣೆಗಾಗಿ ಅನುದಾನದ ರೂಪದಲ್ಲಿ ಸರ್ಕಾರದಿಂದ ಧನ ಸಹಾಯ ನೀಡಲಾಗುತ್ತದೆ. ನಬಾರ್ಡ್‌ನವತಿಯಿಂದ ಈ ಸಹಕಾರ ಸಂಘಗಳಿಂದ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ದುಡಿಯುವ ಬಂಡವಾಳಕ್ಕಾಗಿ ಸಾಲ ಸೌಲಭ್ಯ ನೀಡಲಾಗುತ್ತಿದೆ.